ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ,

ಕನಕಪುರ.

**ಸಿ. ಸಿ. ಃ 1448/2017**

ದೋಷರೋಪಣೆ

ಕು. ಪಾರ್ವತಿ, ಬಿ.ಎ.ಎಲ್, ಎಲ್.ಎಲ್.ಬಿ. ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ

1. ಶಂಕರ
   ಬಿನ್ ಕುಳ್ಳೇಗೌಡ
   ವಯಸ್ಸು 27 ವರ್ಷಗಳು,
   ವಾಸಃ ತೋಟಹಳ್ಳಿ ಗ್ರಾಮ
   ಸಾತನೂರು ಹೋಬಳಿ
   ಕನಕಪುರ ತಾಲ್ಲೂಕು

**ಎಂಬ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪವೇನೆಂದರೆಃ-**

ಸಾತನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಿನಾಂಕ.04.02.2016 ರಂದು ರಾತ್ರಿ ಸುಮಾರು 8ಃ30 ಗಂಟೆ ಸಮಯದಲ್ಲಿ ಕನಕಪುರ ತಾಲ್ಲೂಕು, ತೋಟಹಳ್ಳಿ ಗ್ರಾಮದಲ್ಲಿ ಚಾಸಾ-3 ನಾಗಣ್ಣ ರವರ ಮನೆಯ ಬಳಿ ಚಾಸಾ-2 ರಿಂದ 5 ರವರು ಮಾತನಾಡಿಕೊಂಡು ನಿಂತಿರುವಾಗ ಆರೋಪಿಯಾದ ನೀವು ಏಕಾಏಕಿ ಬಂದು ಚಾಸಾ-2 ಪಾಪಣ್ಣ ರವರಿಗೆ ಏಕೋ ಇಲ್ಲಿ ನಿಂತಿರುವೆ ಮನೆಗೆ ಹೋಗಿ ಹೊಟ್ಟೆ ದಬ್ಬಾಕಿಕೊಂಡು ಮಲಕೋ ಹೋಗೋ ಬೋಳಿಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು ಹಾಗೂ ಚಾಸಾ-1 ಗೌರಮ್ಮ ರವರು ಏನೋ ಗಲಾಟೆ ಎಂದು ಕೇಳಿದ್ದಕ್ಕೆ ಅವರಿಗೂ ಸಹ ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಂತೆ ದಂಡಿಯ ಅಪರಾದವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುವೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸ್ವ ಇಚ್ಛೆಯಿಂದ ಮಾರಾಕಾಯುಧವಾದ ಬೀಯರ್ ಬಾಟಲ್‌ನ್ನು ಹಿಡಿದು ಈ ಬಾಟಲ್‌ನಿಂದಲೆ ನಿನ್ನನ್ನು ಹೊಡೆದು ಸಾಯಿಸಿ ಬಿಡುತ್ತೇನೆಂದು ಪ್ರಾಣ ಬೆದರಿಕೆಯನ್ನು ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.506 ರಂತೆ ದಂಡಿಯ ಅಪರಾದವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುವೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸ್ವ ಇಚ್ಛೆಯಿಂದ ಮಾರಾಕಾಯುಧವಾದ ಬೀಯರ್ ಬಾಟಲ್ ನಿಂದ ಚಾಸಾ-2 ರವರ ಎದೆಯ ಮೇಲೆ ಮತ್ತು ಕತ್ತಿನ ಮೇಲೆ ಹೊಡೆದು ನಂತರ ಮಾರಾಕಾಯುಧವಾದ ಕಲ್ಲಿನಿಂದ ಬಲಗಾಲಿನ ಮಂಡಿಯ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.324 ರಂತೆ ದಂಡಿಯ ಅಪರಾದವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುವೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-2 ರವರನ್ನು ಕೆಳಕ್ಕೆ ಬಿಳಿಸಿ ಸ್ವಇಚ್ಛೆಯಿಂದ ನಿಮ್ಮ ಕಾಲಿನಿಂದ ಒದ್ದು ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ರಂತೆ ದಂಡಿಯ ಅಪರಾದವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುವೀರಿ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆದೊಳಗೆ ಬರುತ್ತಿದ್ದು, ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರುಪಡಿಸಿದ್ದೇನೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ

ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ,

ಕನಕಪುರ.

ಸಿ.ಸಿ. ನಂ.1448/2017

ಸಾತನೂರು ಪೊಲೀಸ್ ಠಾಣೆ ವಿರುದ್ಧ 1. ಶಂಕರ
ಬಿನ್ ಕುಳ್ಳೇಗೌಡ
ವಯಸ್ಸು 27 ವರ್ಷಗಳು,
ವಾಸಃ ತೋಟಹಳ್ಳಿ ಗ್ರಾಮ
ಸಾತನೂರು ಹೋಬಳಿ
ಕನಕಪುರ ತಾಲ್ಲೂಕು

:: ಆಪಾದನೆ ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ

ಆರೋಪಿ ಸಹಿ